ಸದಸ್ಯರಲ್ಲ. ಆದುದರಿಂದ ಆ ಎಲ್ಲಾ ಆಪಾದನೆಗಳನ್ನು ಕಡತದಿಂದ ತೆಗೆದುಹಾಕಬೇಕು. ಆಮೇಲೆ ಅವರು ಹಣ ಖರ್ಚು ಮಾಡಿದ್ದಾರೆ ಎಂದು ಹೇಳಿದ್ದಾರೆ. ಅದನ್ನು ಅವರ ಸ್ವಂತ ಮನೆಗೆ ಖರ್ಚು ಮಾಡಿಲ್ಲ. ಯೂನಿವರ್ಸಿಟಿಯಲ್ಲಿ ಸೆನೆಟ್ ಇದೆ. ಸಿಂಡಿಕೇಟ್ ಇದೆ, ಅಲ್ಲಿ ಹೋಗಿ ಕಂಪ್ಲೇಂಟ್ ಹೇಳ ಬೇಕು. ಅದರೂ ಇದರ ಬಗ್ಗೆ ವಿವರವಾದ ವರದಿಯನ್ನು ತರಿಸಿ ಉತ್ತರ ಕೊಡಲು ಮಾನ್ಯ ವಿದ್ಯಾ ಮಂತ್ರಿಗಳಿಗೆ ತಿಳಿಸುತ್ತೇನೆ.

ಶ್ರೀ ಬಿ. ಡಿ. ಬಸವರಾಜ್.—ಇನ್ನೊಂದು ವಿಚಾರ ಇದೆ.

ಅಧ್ಯಕ್ಷರು.—ತಾವು ಕುಳಿತುಕೊಳ್ಳಿ.

ಶ್ರೀ ಬಿ. ಡಿ. ಬಸವರಾಜ್.—ನನ್ನ ಹತ್ತಿರ ರಿಕಾರ್ಡ್ ಇದೆ. ವೈಸ್‌ಚಾನ್ಸಲರ್ ಅವರ ಮಗನಿಗೆ ಎನ್. ಓ. ಸಿ. ಕೊಟ್ಟಿದ್ದಾರೆ.

ಅಧ್ಯಕ್ಷರು.—ನೋಟೀಸ್ ಅವರ ಕಡೆ ಇದೆ, ಸಂಬಂಧಪಟ್ಟವರಿಗೆ ತಿಳಿಸುತ್ತಾರೆ.

ಶ್ರೀ ಬಿ. ಡಿ. ಬಸವರಾಜ್.—ಸಭಾಧ್ಯಕ್ಷರೆ, ನನಗೆ ಅವಕಾಶ ಕೊಟ್ಟಿದ್ದೀರಿ, ಎಲ್ಲರೂ ಮಾತನಾಡಿ ದ್ದಾರೆ, ನಾನೂ ಹೇಳಬೇಕು.

ಅಧ್ಯಕ್ಷರು.—ನೀವು ಈ ರೀತಿ ಹೇಳಿದರೆ ಅದು ರಿಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ಬಿ. ಡಿ. ಬಸವರಾಜ್.—ರೆಕಾರ್ಡ್ ಬೇಕಾಗಿಲ್ಲ. ನನ್ನ ಹತ್ತಿರ ರಿಕಾರ್ಡ್ ಇದೆ, ಮಾರ್ಕ್ ಕಾರ್ಡ್ ಇದೆ, ಕೊಡುತ್ತೇನೆ. ಏನು ದಾಖಲೆ ಬೇಕೋ ಅದನ್ನು ನಾನು ಕೊಡುತ್ತೇನೆ.

ಅಧ್ಯಕ್ಷರು.—ತಾವು ಕುಳಿತುಕೊಳ್ಳಿ.

ಶ್ರೀ ಬಿ. ಡಿ. ಬಸವರಾಜ್.—ತಾವು ಮೊದಲು ಅಪ್ಪಣೆ ಕೊಟ್ಟಿದ್ದೀರಿ.

ಅಧ್ಯಕ್ಷರು.—ತಮಗೆ ರೂಲ್ಸ್ ರೆಗ್ಯುಲೇಷನ್ಸ್ ಗೊತ್ತಿಲ್ಲವೇ ? ವರದಿ ತರಿಸಿಕೊಳ್ಳುತ್ತೇನೆಂದು ಮಿನಿಸ್ಟರ್ ಉತ್ತರ ಹೇಳಿದ್ದಾರೆ.

ಶ್ರೀ ಬಿ. ಡಿ. ಬಸವರಾಜ್.—ಇನ್ನೊಂದು ಬಾಕಿ ಇದೆ.

ಅಧ್ಯಕ್ಷರು.—ನೀವು ಏನು ಹೇಳಿದರೂ ಈಗ ರಿಕಾರ್ಡ್‌ಗೆ ಹೋಗುವುದಿಲ್ಲ. ತಾವು ಕುಳಿತುಕೊಳ್ಳಿ.

ಶ್ರೀ ಬಿ. ಡಿ. ಬಸವರಾಜ್.—ಒಂದು ನಿಮಿಷ ಓದಿಬಿಡುತ್ತೇನೆ.

ಅಧ್ಯಕ್ಷರು.—ನೀವು ಹೇಳಿದ್ದುದು ರಿಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ಬಿ. ಡಿ. ಬಸವರಾಜ್.—ರಿಕಾರ್ಡ್ ಬೇಡ, ಓದಿಬಿಡುತ್ತೇನೆ.

ಅಧ್ಯಕ್ಷರು.—ಇದನ್ನು ರಿಕಾರ್ಡ್ ಮಾಡಬೇಡಿ.

* * * * *

ಶ್ರೀ ಬಿ. ಡಿ. ಬಸವರಾಜ್.—ಇವರ ಮತ್ತೊಬ್ಬ ಸುಪುತ್ರರಿಗೆ ಪಿ.ಸಿ.ಬಿಯಲ್ಲಿ ೩೮ ಪರ್ಸೆಂಟ್ ಮಾರ್ಕ್ಸ್ ಬಂದಿದ್ದರೂ ಬೆಂಗಳೂರು ಅಂಬೇಡ್ಕರ್ ಮೆಡಿಕಲ್ ಕಾಲೇಜಿನಲ್ಲಿ ೧ನೇ ಎಂ.ಬಿ.ಬಿ.ಎಸ್.ಗೆ ಸೀಟು ಕೊಟ್ಟಿದ್ದಾರೆ. ಈ ದಾಖಲೆಯನ್ನು ಕೊಡುತ್ತೇನೆ.

ಅಧ್ಯಕ್ಷರು.—ಏನಾದರೂ ಇದ್ದರೆ ಕಳಿಸಿಕೊಡಿ.

೧೮. ಕುಂದಾಪುರ ತಾಲ್ಲೂಕಿನ ಶಿರೂರಿನಿಂದ ಯಡ್ತರೆಗೆ ಹೋಗುವ ರಸ್ತೆಹಾಗೂ ಮಾರಣಕಟ್ಟೆ ಸೇತುವೆಯ ಕೂಡು ರಸ್ತೆ ಅಪೂರ್ಣವಾಗಿರುವುದು.

ಶ್ರೀ ಜಿ. ಎಸ್. ಆಚಾರ್.—ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯ ಉತ್ತರದ ತುಟ್ಟತುದಿ ಯಲ್ಲಿರುವ ಕುಂದಾಪುರ ತಾಲ್ಲೂಕಿನ ಶಿರೂರು ಜಯಂತಿ ಗ್ರಾಮವಾಗಿದ್ದು, ಶಿರೂರಿನಿಂದ ಯಡ್ತರೆಗೆ ಕೂಡು ರಸ್ತೆಯನ್ನು ಕನಿಷ್ಠ ಅವಶ್ಯಕತೆ ಕಾರ್ಯಕ್ರಮದನ್ವಯ ಸುಮಾರು ಎಂಟು ವರ್ಷಗಳ ಹಿಂದೆ

* Portion not recorded as Ordered by the Chair

ಮಂಜೂರು ಮಾಡಲಾಗಿದ್ದ ರಸ್ತೆಯಲ್ಲಿ ಶಿರೂರು ಕರಾವಳಿ ದೊಂಬೆಯಲ್ಲಿ ಸ್ವಲ್ಪ ಭಾಗ ಭೂಸ್ವಾಧೀನದ ತೊಂದರೆಯಿಂದ್ದಾಗಿ ಅಭಿವೃದ್ಧಿ ಆಗಿಲ್ಲ. ಅದೇರೀತಿ ಮಾರಣಕಟ್ಟೆ ಸೇತುವೆಯ ಕೂಡು ರಸ್ತೆಯಲ್ಲಿ ಸಹಾ ಭೂಸ್ವಾಧೀನವಾಗದೆ ರಸ್ತೆ ನಿರ್ಮಾಣ ಬಾಕಿ ಉಳಿದಿದೆ. ಆರೆಂಟು ವರ್ಷಗಳಾದರೂ ಆಡಳಿತ ಯಂತ್ರದ ವಿಳಂಬ ನೀತಿಯಿಂದಾಗಿ ಎರಡೂ ರಸ್ತೆಗಳು ಅಪೂರ್ಣವಾಗಿದ್ದು ಜನ ಹಾಗೂ ವಾಹನ ಸಂಚಾರಕ್ಕೆ ಬಹಳ ತೊಂದರೆಯಾಗಿದೆ. ಈ ಕುರಿತು ಕ್ಷಿಪ್ರ ಕಾರ್ಯಾಚರಣೆ ನಡೆಸಿ ಭೂಸ್ವಾಧೀನ ಪಡಿಸಿಕೊಳ್ಳಬೇಕಾಗಿಯೂ ಕನಿಷ್ಟ ಅವಶ್ಯಕತೆ ಯೋಜನೆಯ ಈ ರಸ್ತೆಗಳನ್ನು ಕನಿಷ್ಟ ೧೯೮೬–೮೭ನೇ ವರ್ಷದಲ್ಲಾದರೂ ತಾರಿನ ಹೊದಿಕೆಯೊಂದಿಗೆ ಪೂರ್ಣ ಗೊಳಿಸಬೇಕಾಗಿಯೂ ಒತ್ತಾಯಿಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಭೂಸ್ವಾಧೀನ ಮಾಡಿಕೊಳ್ಳುತ್ತೇವೆ, ಮತ್ತು ಆ ಕಾರ್ಯವನ್ನು ಮುಗಿಸುತ್ತೇವೆ,

ಕರ್ನಾಟಕ ಭೂ ಕಂದಾಯ (ಎರಡನೆಯ ತಿದ್ದುಪಡಿ) ವಿಧೇಯಕ ೧೯೮೬

ಅಧ್ಯಕ್ಷರು.—ಈಗ ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ವಿಧೇಯಕ ೧೯೮೬ ಇದರ ಮಂಡನೆ.

ಶ್ರೀ ಎಸ್. ಆರ್. ಬೊಮ್ಮಾಯಿ,—ಮಾನ್ಯ ಅಧ್ಯಕ್ಷರೆ, ಈ ವಿಧೇಯಕವನ್ನು ಮಂಡಿಸಿ ಹಾಕಲು ಬೇಕು ಎಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ. ಹೆಚ್ ಪಾಟೀಲ್.—ಇದರಲ್ಲಿ ಕಠಿಣ ಸಮಸ್ಯೆಗಳಿರುವುದರಿಂದ ವಿರೋಧ ಪಕ್ಷದವರ ಜೊತೆ ಚರ್ಚೆಮಾಡಿ ಮಂಡಿಸಿ ತೆಗೆದುಕೊಳ್ಳುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ—ವಿರೋಧಪಕ್ಷದವರ ಮತ್ತು ನಮ್ಮ ಪಕ್ಷದವರ ಸಲಹೆ ತೆಗೆದುಕೊಳ್ಳುತ್ತೇನೆ.

Statement by the Minister

ಹಾಲಹಳ್ಳಿ ಗ್ರಾಮದಲ್ಲಿ ಪುಟ್ಟಮಾದೇಗೌಡನ ಮನೆಯಲ್ಲಿ ನಡೆದ ಕಳ್ಳತನದ ಬಗ್ಗೆ

ಅಧ್ಯಕ್ಷರು.—ನಿನ್ನೆ ನಿಯಮ ೩೫ರ ಕೆಳಗೆ ಶ್ರೀಮತಿ ಮುಕ್ತರುನ್ನೀಸಾರವರು ಕೇಳಿದ ವಿಷಯಕ್ಕೆ ಈಗ ಮಾನ್ಯ ಗೃಹ ಮಂತ್ರಿಗಳು ಉತ್ತರ ಕೊಡುತ್ತಾರೆ,

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೆ, ನಿನ್ನೆ ಈ ಸಭೆಯಲ್ಲಿ ಶ್ರೀಮತಿ ಮುಕ್ತರುನ್ನೀಸಾರವರು ಸೂಚನೆ ಕೊಟ್ಟಿದ್ದರು. ಅದಕ್ಕೆ ಉತ್ತರ ಈ ರೀತಿ ಇದೆ.

ದಿನಾಂಕ. ೨೦–೧೨–೮೫ರ ರಾತ್ರಿ ಹಾಲಹಳ್ಳಿ ಗ್ರಾಮದ ಪುಟ್ಟಮಾದೇಗೌಡನ ಮಗ ಪಾಪಣ್ಣ ಉರುಫ್ ಪಾಪ ಮತ್ತು ಬಿಳಿಕೆರೆ ಗ್ರಾಮದ ರಾಜು ಎಂಬುವರು ಚಾಮರಾಜನಗರದ ಟೌನ್‌ನಲ್ಲಿರುವ ಸಿ ಎಸ್. ಉಬೇದುಲ್ಲಾ ಷರೀಫ್ ಎಂಬುವರ ಮನೆಯಲ್ಲಿ ಸುಮಾರು ೩೫ ಸಾವಿರ ರೂಪಾಯಿ ನಗದು ಹಣ ಮತ್ತು ೯ ಸಾವಿರ ರೂಪಾಯಿ ಬೆಲೆ ಬಾಳುವ ಒಡವೆಗಳನ್ನು ಕದ್ದಿರುವರು. ಇದರ ಬಗ್ಗೆ ಚಾಮರಾಜನಗರ ಪಶ್ಚಿಮ ಪೋಲೀಸ್ ಠಾಣೆಯಲ್ಲಿ ಅಪರಾಧ ಸಂಖ್ಯೆ ೧೫೫:೮೫ ಕಲಂ ೪೫೭, ಭಾ.ದಂ.ಸಂ.ಯಂ ಪ್ರಕಾರ ಗುನ್ನೆಯೊಂದನ್ನು ನೊಂದಾಯಿಸಲಾಯಿತು.

೨. ದಿನಾಂಕ. ೧೯–೧–೮೬ರಂದು ಅಪರಾಧಿಯಾದ ಪಾಪಣ್ಣನನ್ನು ದಸ್ತಗಿರಿ ಮಾಡಿ ವಿಚಾರಿಸಲಾಗಿ ಅವನು ಅಪಹರಿಸಿದ ಒಡವೆಗಳನ್ನು ಮೈಸೂರಿನಲ್ಲಿರುವ ರಘುವೀರ ಜ್ಯೂಯಲರಿ ಪಾಪ್ ಎಂಬಲ್ಲಿ ೨೦ ಸಾವಿರ ರೂಪಾಯಿಗಳಿಗೆ ಮಾರಾಟ ಮಾಡಿರುವುದಾಗಿ ಹೇಳಿರುತ್ತಾನೆ. ಅದೇ ದಿನ ಚಾಮರಾಜನಗರದ ಆರಕ್ಷಕ ವೃತ್ತ ನಿರೀಕ್ಷಕರನ್ನು ಮತ್ತು ಇತರ ಪೋಲೀಸ್ ಸಿಬ್ಬಂದಿಯವರನ್ನು ಆ ಅಂಗಡಿಗೆ ಕರೆದುಕೊಂಡು ಹೋಗಿ ಜನಾರ್ಧನ್‌ನ ಮಗನಾದ ಜೆ. ಬಿ.ಎನ್. ರಘುರಾಮ ಎಂಬುವರನ್ನು ತೋರಿಸಿ ಅವನು ಅವುಗಳನ್ನು ಪಡೆದಿರುವನೆಂದು ಗುರ್ತಿಸಿದನು. ಜೆ. ಬಿ. ಎನ್. ರಘುರಾಮ ಅದೇ ರೀತಿ ಪಾಪಣ್ಣನನ್ನು ಗುರ್ತಿಸಿ ಅವನಿಂದ ಒಡವೆಗಳನ್ನು ಪಡೆದಿರುವುದಾಗಿ ಹೇಳಿ ಅವುಗಳಲ್ಲಿ ಒಂದು ಜೊತೆ ಕಿವಿ ಓಲೆಯನ್ನು ಬಿಟ್ಟು ಉಳಿದ ೪೩೨ ಗ್ರಾಂ ತೂಕ ಉಳ್ಳ ಒಡವೆಗಳನ್ನು ಕರಗಿಸಿ ಗಟ್ಟಿ ಮಾಡಿರುವುದಾಗಿ ಒಪ್ಪಿಕೊಂಡಿರುವನು. ಅವನು ೪೩೨ ಗ್ರಾಂ ತೂಕದ ಚಿನ್ನದ ಗಟ್ಟಿಯನ್ನು ಮತ್ತು ಉಳಿಸಿ